ಅಧ್ಯಕ್ಷರು: ಆಡಳಿತಾತ್ಮಕ ಮಂಜೂರಾತಿಯಾದ ಮೇಲೆ ಬೇಗನೆ ತರಿಸಿಕೊಂಡು ಮಾಡಿಕೊಡುತ್ತೇನೆಂದು ಹೇಳಿದ್ದಾರಲ್ಲಾ.

ಶ್ರೀ ಸಿ.ಎನ್.ಬಾಲಕೃಷ್ಣ: ಅದಕ್ಕೆ ಆದಷ್ಟು ಬೇಗನೆ ಆಡಳಿತಾತ್ಮಕ ಮಂಜೂರಾತಿ ಆಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದಕ್ಕೆ ಅವಕಾಶ ಆಗಬೇಕೆಂದು ನಾನು ಮತ್ತೊಮ್ಮೆ ತಮಗೆ ಮನವಿ ಮಾಡುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಆದಷ್ಟು ಬೇಗ ಅದನ್ನು ಪೂರ್ಣಗೊಳಿಸುತ್ತೇನೆ.

ಅಧ್ಯಕ್ಷರು: O.K. ಮಾನ್ಯ ಕೆ.ಎಂ.ಶಿವಲಿಂಗೇಗೌಡರು ಸದನದಲ್ಲಿ ಇಲ್ಲ. ಶ್ರೀ ಮುನಿರತ್ನ ಸದನದಲ್ಲಿಲ್ಲ, ಶ್ರೀ ಶ್ರೀನಿವಾಸ ಜಿ.ಹೆಚ್. ಇಲ್ಲ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, 09.07.2014ರ 13ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 228 ಪ್ರಶ್ನೆಗಳ ಪೈಕಿ 202 ಪ್ರಶ್ನೆಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. ಈಗ ಅರ್ಜಿಯನ್ನೊಪ್ಪಿಸುವುದು.

(ಅನುಬಂಧ–I) (ಭಾಗ–II)